(SRI VEERENDRA PATIL)

3 miles in length, plans and estimates have been prepared and an amount of Rs. 22,000 has been sanctioned for this work. Thus, most of the roads have been sanctioned in Belgaum Taluk and the work is in progress. During next year *i.e.*, 1968-69, I think, all these works could be completed.

Sri P. B. NANDIHALI.—Is the Hon'ble Minister aware that there are big bridges in the roads ?

Sri VEERENDRA PATIL.—If there are bridges, our Engineers will have to prepare plans and estimates. If the amount is going to be a substantial one then it has to be budgeted and if it happens to be a minor one, then it will be included in the estimates and that work will be attended as it is.

Fall in Prices of Essential Articles

324. Sri S. M. GUREDDI (Muddebihal).—

Will the Minister for Finance, Planning and Commerce and Industries be pleased to state :—

(*a*) whether it is a fact that the rates of the essential articles have gone down considerably from the last one month ;

(*b*) if so, whether they will stop the excess D.A. proposed to be given to NGOs ?

A.—Sri RAMAKRISHNA HEGDE (Minister for Finance, Planning and Commerce and Industries).—

(*a*) There is a downward trend in the rates of essential articles, but the consumer price index for working class is available only up to November 67.

(*b*) The additional D.A. is sanctioned with reference to every ten point rise in the 12 month average of the All India Working Class Consumer Price Index (1949 = 100) as per the recommendation of the Gajendragadkar Commission. Since the Pay Commission has proposed the higher rates of Dearness Allowance keeping in view the recommendation of the Gajendragadkar Commission, the question of reducing the D.A. will be considered when there is a steady fall in prices over a twelve month average.

ಶ್ರೀ ಎಸ್. ಎಂ. ಗುರೆಡ್ಡಿ.—ಈಗ 4—5 ತಿಂಗಳಿಂದ ತಮಗೆ ಇಳುವರಿ ವರದಿ ಬಂದಹಾಗೆ ಕಾಣುವುದಿಲ್ಲ. ಬೆಲೆ ಈಗ ಇಳಿದಿರುವುದರಿಂದ ಅದು ಏರುವವರೆಗೆ ಹೆಚ್ಚುವರಿ ಭತ್ಯವನ್ನು ಕೊಡುವುದನ್ನು ನಿಲ್ಲಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಪೇ-ಕಮಿಷನ್ ರಿಪೋರ್ಟ್‌ರುವುದು ಗಜೇಂದ್ರಗಡ್‌ಗರ್ ಕಮಿಷನ್ ಪ್ರಾಮುಖ್ಯರಾಮೇಲೆ. ನಮಗೆ ಬಳಕೆದಾರರ ಪ್ರೈಸ್ ಇಂಡೆಕ್ಸ್ ನವೆಂಬರ್ 67ರವರೆಗೆ ಮಾತ್ರ

ಇದೆ, ಅಲ್ಲಿಯವರೆಗೆ ಮಾತ್ರ ಅದರ ಅಂಕಿಸಂಖ್ಯೆ ದೊರೆತಿದೆ. ಆರ್ ಇಂಡಿಯಾ ಅವರೇಜ್ ಪ್ರಕಾರ ನಾವು ಮುಂದುವರೆಯಬೇಕು. ಅದುದರಿಂದ ನಾವು ಆರ್ ಇಂಡಿಯಾ ಅವರೇಜ್ ಕಡಿಮೆಯಾಗುವವರೆಗೆ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗಾಗಲೆ ರಾಜ್ಯ ಸರ್ಕಾರ ಎನ್.ಜಿ.ಓ.ಗಳಿಗೆ 3—4 ಸಾರಿ ತುಟ್ಟಿಭತ್ಯ ಕೊಟ್ಟಾಗಲೆಲ್ಲಾ ಬೆಲೆ ಏರಿದೆ. ಆದಕಾರಣ ಬೆಲೆ ಏರುವುದಕ್ಕೆ ಹೀಗೆ ಕೊಡುವುದೂ ಒಂದು ಕಾರಣವಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಅದೂ ತಕ್ಕಮಟ್ಟಿಗೆ ಕಾಂಟ್ರಿಬ್ಯೂಟರಿ ಕಾರಣವಿರಬಹುದು. ಅದನ್ನು ಅನೇಕಾವರ್ತಿ ಈ ಸಭೆಯಲ್ಲಿ ಹೇಳಿದ್ದೇನೆ. ಅದಕ್ಕೆ ನಾವೇನೂ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಕೇಂದ್ರ ಸರಕಾರದವರು ತಮ್ಮ ನೌಕರರಿಗೆ ಗಜೇಂದ್ರ ಗಡ್‌ಕರ್ ಕಮಿಷನ್ ಕೊಟ್ಟಿರುವ ರೀತಿಯಲ್ಲಿ, ಈಗ ಕೇಂದ್ರ ಸರಕಾರದ ನೌಕರರಿಗೆ ಕೊಡುತ್ತಿರುವ ರೀತಿಯಲ್ಲಿ ಅದೇ ತಾರೀಖಿನಿಂದ ಇಲ್ಲಿ ಕೊಡುತ್ತಿಲ್ಲ, ವೆಚ್ಚವನ್ನು ಪೂರ್ಣವಾಗಿ ನ್ಯೂಟ್ರಲೈಜ್ ಮಾಡುತ್ತಿಲ್ಲ, ಆದುದರಿಂದ ಇನ್ನೂ ಹೆಚ್ಚಾಗಿ ಕೊಡಬೇಕು, ರಾಜ್ಯ ನೌಕರರಿಗೆ ಕೇಂದ್ರ ಸರಕಾರದವರು ಕೊಡುವ ಎರ್ರಾ ಭತ್ಯಗಳನ್ನೂ ಕೊಡಬೇಕು ಎಂದು ರಾಜ್ಯ ಸರಕಾರದ ನೌಕರರು ಕೇಳುತ್ತಿರುವುದು ಗಮನಕ್ಕೆ ಬಂದಿದೆಯೇ ?

1-30 P.M.

ಶ್ರೀ ರಾಮಕೃಷ್ಣ ಹೆಗಡೆ.—ಕೇಂದ್ರ ಸರ್ಕಾರದ ನೌಕರರು ಏನು ಹೇಳುತ್ತಾರೆಯೋ ನನಗೆ ಗೊತ್ತಿಲ್ಲ. ಈ ತಿಂಗಳ ಮೊದಲನೆಯ ತಾರೀಖು ನಾವು ಏನು ಹೆಚ್ಚಿನ ತುಟ್ಟಿಭತ್ಯ ಕೊಡುವಂತಹ ಅನೌನ್ಸ್‌ಮೆಂಟ್ ಮಾಡಿದ್ದೇವೆ. ಅದರಿಂದ ರಾಜ್ಯಸರ್ಕಾರದ ನೌಕರರಿಗೆ ತೃಪ್ತಿಯಾಗಿದೆ ಎಂಬುದು ಮಾತ್ರ ಗೊತ್ತಿದೆ.

ಶ್ರೀ ಜಿ. ರಾಮೇಗೌಡ.— ಈಗ ಆಹಾರಧಾನ್ಯಗಳ ಬೆಲೆ ಇಳಿಮುಖವಾಗುತ್ತಿರುವ ಪ್ರವೃತ್ತಿ ಇದೆ ಎಂದು ಹೇಳಿದ್ದೀರಿ. ಹೋಲ್‌ಸೇಲ್ ಧಾರಣೆ ರಾಗಿಯದು ಇಳಿದಿದೆ, ಮೇಜ್‌ದು ಇಳಿದಿದೆ. ಅಕ್ಕಿಯದು ಇಳಿದಿವೆ. ಮೇಜ್ ಮುಂತಾದುವುಗಳ ಬೆಲೆ 30 ಪರ್ಸೆಂಟ್ ಇಳಿದಿದೆ. ಅಕ್ಕಿ ಬೆಲೆ 20 ಪರ್ಸೆಂಟ್ ಇಳಿದಿದೆ, ಇದು ಎಷ್ಟು ಪರ್ಸೆಂಟ್ ಇಳಿದಿದೆ ಈ ವಿಷಯ ಸರ್ಕಾರದ ಗಮನಕ್ಕೆ ಬರುತ್ತದೆ ?

ಶ್ರೀ ರಾಮಕೃಷ್ಣ ಹೆಗಡೆ.—ನಾವು ಅಂಕಿಸಂಖ್ಯೆಗಳ ಆಧಾರದಮೇಲೆ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ ಎಂಬುದನ್ನು ಆಗಲೇ ಹೇಳಿದೆ. ಹೋಲ್‌ಸೇಲ್ ಧಾರಣೆ ರಾಗಿಯದು, ಮೇಜ್‌ದು ಮತ್ತು ಅಕ್ಕಿಯದು ಇಳಿದಿದೆ, ಅದೇ ರೀತಿ ಬೇರೆಬೇರೆ ಪದಾರ್ಥಗಳ ಬೆಲೆಯೂ ಇಳಿದಿರಬಹುದು, ಆದರೆ ನಾವು ಒಪ್ಪಿಕೊಂಡಿರತಕ್ಕ ತತ್ವದ ಪ್ರಕಾರ ಆರ್ ಇಂಡಿಯಾ ಅವರೇಜ್ ಹೇಗೆ ಇದೆ ಅದನ್ನು ಒಪ್ಪಿಕೊಂಡಿದ್ದೇವೆ. ಆದ್ದರಿಂದ ಕೆಲವು ಭಾಗದಲ್ಲಿ ಧಾರಣೆ ಇಳಿದತಕ್ಷಣ ಸರ್ಕಾರ ಒಮ್ಮೆಲೆ ದುಡುಕಿ ಇನ್ನೊಂದು ನಿರ್ಣಯ ತೆಗೆದುಕೊಳ್ಳುವುದು ಸರಿಯಲ್ಲ, ಅದಕ್ಕೆ ಇನ್ನೂ ಸ್ವಲ್ಪದಿವಸ ಕಾದು ನೋಡಬೇಕು.

ಶ್ರೀ ಸಿದ್ಧಯ್ಯ ಕಾಶೀಮಠ.—ಈಗ ಕೊಡತಕ್ಕಷ್ಟೇ ಹಾಗೂ ಡಿ.ಎ. ಜೀವನಮಟ್ಟಕ್ಕೆ ಸಾಕಾಗದೇ ಇರುವುದರಿಂದ ತುಟ್ಟಿಭತ್ಯವನ್ನು ಸಂಬಳದಲ್ಲಿ ಮರ್ಜ್ ಮಾಡಿ ಖಾಯಂ ಗೊಳಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರ ಪೇ ಕಮಿಷನ್‌ಗೆ ಒಪ್ಪಿಸಿದ್ದೇವೆ ವಿಚಾರ ಮಾಡಲಿಕ್ಕೆ, ಅವರು ಕೊನೆಯದಾಗಿ ಯಾವ ಒಂದು ಶಿಫಾರಸು ಮಾಡುತ್ತಾರೆ ಎಂದು ಕಾದುನೋಡೋಣ.

ಶ್ರೀ ಎಚ್. ಸಿದ್ಧವೀರಪ್ಪ.—ಧಾರಣಿವಾಸಿಗಳು ಈಗಾಗಲೇ ಗಣನೀಯವಾಗಿ ಇಳಿಯುತ್ತಾ ಇರುವುದರಿಂದ ಬೆಳೆಯತಕ್ಕ ರೈತರಲ್ಲಿ ಆಗಲೇ ಕಳವಳ ಪ್ರಾರಂಭವಾಗಿ ಪಂಜಾಬ್ ಮತ್ತು ಹರಿಯಾಣದಲ್ಲಿ ಗ್ರೋಲೆಸ್ ಪುಡ್ ಅಂತ ಕ್ಯಾಂಪೇನ್ ಪ್ರಾರಂಭವಾದ ಹಾಗೆ ಇಲ್ಲಿಯೂ ಕೂಡ ಆಗತಕ್ಕ ಸಂಭವ ಇರುವುದು ಗೊತ್ತೇ ?

ಶ್ರೀ ರಾಮಕೃಷ್ಣ ಹೆಗಡೆ.—ಈ ಪ್ರಶ್ನೆಗೂ ಮಾನ್ಯ ಸದಸ್ಯರ ಉಪಪ್ರಶ್ನೆಗೂ ಏನು ಸಂಬಂಧ ಇದೆಯೋ ಗೊತ್ತಿಲ್ಲ. ಹೇಗೆ ಇರಲಿ ಇಂದು ಪಂಜಾಬ್‌ನಲ್ಲಿ ಮತ್ತು ಹರಿಯಾಣದಲ್ಲಿ ಗೋಧಿ ಬೆಲೆ

(ಶ್ರೀ ರಾಮಕೃಷ್ಣ ಹೆಗಡೆ)

ಬಹಳ ಕಡಿಮೆಯಾಗಿರುವುದಕ್ಕೆ ಕಾರಣ, ನಮ್ಮ ದೇಶದಲ್ಲಿ ಆಹಾರ ಪದಾರ್ಥ ಸರ್‌ಪ್ಲಸ್ ಆಗಿದೆ ಅಂತ ಅಲ್ಲ. ನಮ್ಮ ದೇಶದಲ್ಲಿ ಜೋನಲ್ ಸಿಸ್ಟಂ ಜಾರಿಗೆ ತಂದಿರುವುದರಿಂದ ಅಲ್ಲಿ ಅದರ ಬೆಲೆ ಬಹಳ ಕಡಿಮೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ನಾವು ಈ ಜೋನಲ್ ಸಿಸ್ಟಂ ತೆಗೆದುಹಾಕಿ ಎಂದು ಹೇಳುತ್ತಾ ಇದ್ದೇವೆ. ಅಂದರೆ ಇಡೀ ಇಂಡಿಯಾದೇಶದಲ್ಲಿ ಒಂದೇ ತರಹ ಬೆಲೆ ಇರುತ್ತದೆ. ಮಾನ್ಯ ಸದಸ್ಯರು ಮೇಜ್ ಬೆಲೆ ಕಡಿಮೆಯಾಗಿದೆ ಎಂದು ಹೇಳಿದರು ಆದಕ್ಕೆ ರಾಜ್ಯಸರ್ಕಾರ ಕೇಂದ್ರಸರ್ಕಾರಕ್ಕೆ ಬಹಳ ಆಗ್ರಹಪೂರ್ವಕವಾಗಿ ಬರೆದುಕೊಂಡಿದೆ, ಈ ಮೇಜನ್ನು ಹೊರದೇಶದಿಂದ ತರಿಸುವುದನ್ನು ನಿಲ್ಲಸಬೇಕು ಎಂದು ಹೇಳಿದ್ದೇವೆ. ಆ ರೀತಿ ಮಾಡಿದರೆ ರೈತರಿಗೆ ಸರಿಯಾದ ಪ್ರತಿಫಲ ಸಿಕ್ಕುವಂತಹ ರೀತಿಯಲ್ಲಿ ಆಗುತ್ತದೆ.

Sri B. P. GANGADHAR.—Has the Government taken a decision that the D.A. that is given to the Government servants will not be either reduced or altered till the Government will be able to peg-down the prices of essential commodities ?

Sri RAMAKRISHNA HEGDE.—I have already submitted to the House that the whole question is under the consideration of the pay Commission. The Pay Commission before submitting its final report to the Government, will take into consideration all these factors.

ಶ್ರೀ ಎಚ್. ಬಿ. ಹ್ಯಾಲನಯ್ಯ.—ಕಳೆದ ಒಂದು ತಿಂಗಳಿಂದ ಅತ್ಯಾವಶ್ಯಕ ವಸ್ತುಗಳ ಬೆಲೆ ಸಾಕಾದಷ್ಟು ಕಡಿಮೆಯಾಗಿದೆ ಎನ್ನುವುದು – ಕೊಳ್ಳುವವರಿಗೆ ಶಕ್ತಿ ಕಮ್ಮಿಯಾಗಿರುವುದರಿಂದ ಈ ವಸ್ತುಗಳ ಬೆಲೆ ಕಮ್ಮಿಯಾಗುತ್ತಾ ಇದೆ ಅಲ್ಲವೇ, ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗಡೆ.—ಈ ಸಂದರ್ಭದಲ್ಲಿ ಅದು ನಿಜ ಅಂತ ಹೇಳುವುದಕ್ಕಾಗುವುದಿಲ್ಲ.

Sri S. R. BOMMAI.—There is only fall in the wholesale prices of food grains because of the zonal restrictions, the retail prices have not come down. Has it come to the notice of the Government ?

ಶ್ರೀ ರಾಮಕೃಷ್ಣ ಹೆಗಡೆ.—ರೀಟೇಲ್ ಪ್ರೈಸ್ ಹೇಗೆ ಇದೆ ಅದನ್ನೂ ಕೂಡ ಕಲೆಹಾಕುತ್ತೇವೆ ಮತ್ತು ಅದರ ಪರಿಣಾಮ ಏನೆಂಬುದು ಸ್ವಲ್ಪ ದಿವಸದ ನಂತರ ಗೊತ್ತಾಗುತ್ತದೆ. 4 ದಿವಸ ಕಡಿಮೆಯಾಗಿ, 4 ದಿವಸ ಹೆಚ್ಚಾದರೆ ಒಮ್ಮೆಲೆ ಆವಸರದಿಂದ ನಿರ್ಣಯ ತೆಗೆದುಕೊಳ್ಳುವುದು ಸೂಕ್ತವಲ್ಲ.

Beautification of Jog Falls and Sharavathy Project Area

325. Sri K. H. SRINIVASA (Sagar).—

Will the Minister for Public Works be pleased to state :—

(*a*) the total amount that is contemplated to be spent for the beautification of the area of Jog Falls and Sharavathy Project area ;

(*b*) the items on which the amount is proposed to be spent ;

(*c*) the number of years over which the proposed amount to be spent is spread over ?

A.—Sri VEERENDRA PATIL (Minister for Public Works).—

(*a*) About Rs. 50 lakhs.